ದಿಃ 25.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್.ಎನ್.ಹೆಚ್ ವಕೀಲರಿಂದ ,**

1. ನಾನು ಕಡದಕಟ್ಟೆಯಲ್ಲಿ 20 ವರ್ಷದಿಂದ ವಾಸವಾಗಿರುತ್ತೇನೆ. ನನ್ನ ಗಂಡ ವೀರಭದ್ರಯ್ಯ ಮೃತ ಪಟ್ಟಿರುತ್ತಾರೆ ಅವರು ಸರ್ಕಾರಿ ಉದ್ಯೋಗದಲಿದ್ದರು ಎಂದರೆ ಸರಿ. ನಾನು 15 ವರ್ಷದಿಂದ ಬಟ್ಟೆ ವ್ಯಾಪಾರ ಮಾಡುತ್ತಿದ್ದೇನೆ. ನಾನು ಬೆಂಗಳೂರು ಮತ್ತು ದಾವಣಗೆರೆಯಿಂದ ಬಟ್ಟೆಯನ್ನು ತರಿಸುತ್ತೇನೆ. ನಾನು ವ್ಯವಹಾರವನ್ನು ಫೋನ್ ಪೇ ಮತ್ತು ಚೆಕ್ ಮೂಖಾಂತರ ಮಾಡುತ್ತೇನೆ ಎಂದರೆ ಸರಿ.

2. ಪ್ರತಿವಾದಿಗಳು ಮಂಜಪ್ಪನ ಹೆಂಡತಿ ಮಕ್ಕಳು ಎಂದರೆ ಸರಿ. ಮಂಜಪ್ಪನವರು ಕೆ.ಎಸ್ ಆರ್ ಸ.ಸಿಯಲ್ಲಿ ಹೆಡ್ ಕಾನ್ ಸ್ಟೇಬಲ್ ಆಗಿದ್ದರು ಎಂದರೆ ಸರಿ. ಮಂಜಪ್ಪನವರು ನನಗೆ ಸುಮಾರು 10 ವರ್ಷದಿಂದ ಪರಿಚಯವಿರುತ್ತಾರೆ. ದಿಃ 09-12-2022 ರಂದು ಮಂಜಪ್ಪನವರು ಮೃತ ಪಟ್ಟಿರುತ್ತಾರೆ. ನಾನು ಕಡದಕಟೆಟಯಲ್ಲಿರುವ ನಮ್ಮ ಮನೆಯಲ್ಲಿ ಮಂಜಪ್ಪನವರಿಗೆ ಸಾಲದ ಹಣವನ್ನು ಕೊಟ್ಟಿರುತ್ತೇನೆ. ನಾನು ಹಣ ಕೊಡುವುದಕ್ಕಿಂತ 01 ತಿಂಗಳ ಮುಂಚೆ ನನಗೆ ಹಣ ಬೇಕೆಂದು ಕೇಳಿರುತ್ತಾರೆ. ನಾನು ಹಣವನ್ನು ಕೆ,ಎಸ್ ಆರ್ .ಸಿ ಯಲ್ಲಿ ಕೆಲಸ ಮಾಡುವ ರಾಘವೇಂದ್ರರವರ ಸಮಕ್ಷಮದಲಿ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಗುರುಮೂರ್ತಿ, ಆನಂದಕುಮಾರ್ ರವರು ಹಾಜರಿದ್ದರು. ದಿಃ10-02-2021 ರಂದು ನಾನು ಹಣವನ್ನು ಕೊಟ್ಟಿರುತ್ತೇನೆ. ಆ ದಿವಸ ನನ್ನ ಬಳಿ ಅಷ್ಟೊಂದು ಹಣ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ನಾನು ನಗದು ರೂಪದಲ್ಲಿ ಹಣವನ್ನು ಕೊಟ್ಟಿರುತ್ತೇನೆ. ನಾನು ಮನೆ ಮಾರಾಟ ಮಾಡಿರುತ್ತೇನೆ ಆ ಸಮಯದಲ್ಲಿ ನನಗೆ ಅವರು ನಗದು ರೂಪದಲ್ಲಿ ಹಣ ಕೊಟ್ಟಿದ್ದರು ಅದನ್ನು ನಾನು ಮನೆಯಲ್ಲೇ ಇಟ್ಟಿದ್ದೆ. ನಾನು ಹಣವನ್ನು ಕೆ,ಎಸ್ ಆರ್ ಸಿ ಯಲ್ಲಿ ಕೆಲಸ ಮಾಡುವ ರಾಘವೇಂದ್ರರವರ ಸಮಕ್ಷಮದಲಿ ಹಣ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಗುರುಮೂರ್ತಿ ಮತ್ತು ಆನಂದಕುಮಾರ್ ಸಮಕ್ಷಮದಲ್ಲಿ ಹಣ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಆನಂದಕುಮಾರ್ ರವರು ಪ್ರನೋಟ್ ಅನ್ನು ಬರೆದಿರುತ್ತಾರೆ ಅವರು ಯಾರೆಂದು ನನಗೆ ಗೊತ್ತಿರುವುದಿಲ್ಲ. ರಾಘವೇಂದ್ರರವರು ಹುತ್ತಾಕಲೋನಿಯಲ್ಲಿ ವಾಸವಾಗಿರುತ್ತಾರೆ. ದಿಃ 10-02-2021 ರಂದು ಮಂಜಪ್ಪನವರು 07 ಲಕ್ಷ ಹಣವನ್ನು ನನ್ನಿಂದ ಪಡೆದು ನಿಪಿ-01 ಪ್ರನೋಟ್ ಅನ್ನು ಬರೆದುಕೊಟ್ಟು ಮಾಸಿಕ 2 ರಷ್ಟು ಬಡ್ಡಿಯನ್ನು ಕೊಡುತ್ತೇನೆಂದು ಹೇಳಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-01 ಕ್ಕೆ ಮಂಜಪ್ಪನವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-01 ರಲ್ಲಿರುವ ಸಹಿಗಳು ಮತ್ತು ಹೆಬ್ಬೆಟ್ಟು ಮಂಜಪ್ಪನವರದ್ದಲ್ಲ ಎಂದರೆ ಸರಿಯಲ್ಲ. ಹಣ ಕೊಟ್ಟ ದಿವಸವೇ ನಿಪಿ-01 ಅನ್ನು ಬರೆದಿರುತ್ತಾರೆ. ಆನಂದಕುಮಾರ್ ರವರು ನಿಪಿ-01 ಅನ್ನು ಬರೆದಿರುತ್ತಾರೆ. ಮಂಜಪ್ಪನವರು ಸಹಿ ಮಾಡಿರುವ ಇಂಕ್ ಗೂ ಮತ್ತು ಬರವಣಿಗೆ ಬಳಸುವ ಇಂಕ್ ಗೂ ವ್ಯತ್ಯಾಸ ಇರುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ನನಗೆ ಮಂಜಪ್ಪ ಯಾರೆಂದು ಗೊತ್ತೇ ಇಲ್ಲ ಎಂದರೆ ಸರಿಯಲ್ಲ. ನಾನು ಮಂಜಪ್ಪನವರಿಗೆ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ರಾಘವೇಂದ್ರರವರು ಸಹಾಯದಿಂದ ನಿಪಿ-01 ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ರಾಘವೇಂದ್ರರವರು ನಮ್ಮ ಊರಿನವರು. ಮಂಜಪ್ಪನವರು ಯಾವಾಗಲೂ ಮದ್ಯಪಾನ ಸೇವನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ರಾಘವೇಂದ್ರ ರವರು ಮಂಜಪ್ಪನವರ ಕುಡಿತದ ಚಟವನ್ನು ದುರುಪಯೋಗಪಡಿಸಿಕೊಂಡು ಈ ದಾಖಲೆಯನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

5. ನಾನು 500 ರೂ ಮುಖಬೆಲೆಯ ನೋಟುಗಳನ್ನು ಕೊಟ್ಟಿರುತ್ತೇನೆ. ಹಣ ಕೊಡುವ ಸಮಯದಲ್ಲಿ ನಾನು ಭಾವಚಿತ್ರವನ್ನು ತೆಗೆದುಕೊಂಡಿರುವುದಿಲ್ಲ. ಮಂಜಪ್ಪನವರು ಎಂದೂ ನನ್ನಿಂದ ಸಾಲ ಪಡೆದಿಲ್ಲ ಮತ್ತು ಬಡ್ಡಿಯನ್ನು ನನ್ನ ಖಾತೆಗೆ ಜಮಾ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-02 ನನ್ನ ಬ್ಯಾಂಕ್ ಖಾತೆಗೆ ಸೇರಿದ ವಿವರಗಳಾಗಿರುತ್ತವೆ. ನಾನು ಬಟ್ಟೆ ಯನ್ನು ಖರೀದಿ ಮಾಡಿದಾಗ ಹಣ ಪಾವತಿ

ಮಾಡಿದ ಬಗ್ಗೆ ನನ್ನ ಬ್ಯಾಂಕ್ ಖಾತೆಯಲ್ಲಿ ನಮೂದಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಎರಡು ಬ್ಯಾಂಕ್ ಖಾತೆ ಇದ್ದು, ಎರಡರಲ್ಲೂ ಪಾವತಿ ಮಾಡಿರುತ್ತೇನೆ. ನಿಪಿ-02 ರಲ್ಲಿ ಮಂಜಪ್ಪನವರು ನನಗೆ ಹಣ ಕೊಟ್ಟಿದ್ದಾರೆ ಎಂದು ತೋರಿಸಲು ಈ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ.

6. ನಾನು ಯಾವುದೇ ಫೈನಾನ್ಸ ಸಂಸ್ಥೆಯಿಂದ ಸಾಲ ಪಡೆದಿರುವುದಿಲ್ಲ. ನಾನು ಮಣಿಪುರಂ ಫೈನಾನ್ಸ ಸಂಸ್ಥೆಯಿಂದ ದಿಃ 28-03-2022 ರಂದು ರೂ.4,73,825/- ಅನ್ನು ಸಾಲ ಪಡೆದಿರುತ್ತೇನೆ ಎಂದರೆ ಸರಿ. ನಾನು ದಿಃ 04-04-2022 ರಂದು Micro Finance ರವರಿಂದ ಸಾಲ ಪಡೆದಿರುತ್ತೇನೆ ಎಂದರೆ ಸರಿ.

7. ಬ್ಯಾಂಕ್ ಮೂಖಾಂತರ ನನಗೆ ಹಣ ಪಾವತಿ ಮಾಡಿದರೆ ಅಥವಾ ನಾನು ಬ್ಯಾಂಕ್ ಮುಖಾಂತರ ಬೇರೆಯವರಿಗೆ ಹಣ ಪಾವತಿ ಮಾಡಿದರೆ ಅದು ನನ್ನ ಬ್ಯಾಂಕ್ ಖಾತೆಯಲ್ಲಿ ನಮೂದಾಗುತ್ತದೆ ಎಂದರೆ ಸರಿ. ಮಂಜಪ್ಪ ಎನ್ನುವವರು ಯಾರೋ ನನ್ನ ಬಟ್ಟೆ ವ್ಯಾಪಾರದ ಗ್ರಾಹಕರಾಗಿದ್ದು ಅವರು ನನ್ನ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಿರುತ್ತಾರೆ ಹೊರತು 01 ಪ್ರತಿವಾದಿ ಯ ಗಂಡ ಮಂಜಪಪನವರು ನನ್ನ ಬ್ಯಾಂಕ್ ಖಾತೆಗೆ ಎಂದೂ ಹಣ ಜಮಾ ಮಾಡಿಲ್ಲ ಎಂದರೆ ಸರಿಯಲ್ಲ. ಮೃತ ಮಂಜಪ್ಪನವರು ಫೋನ್ ಪೇ ಮುಖಾಂತರವೇ ಹಣ ನನ್ನ ಖಾತೆಗೆ ವರ್ಗಾವಣೆ ಮಾಡುತ್ತಿದರು ಎಂದು ತೋರಿಸಲು ಮಂಜಪ್ಪನವರಿಗೆ ಸೇರಿದ ಫೋನ್ ಪೇ ಮೂಲಕ ಪಾವತಿ ಮಾಡಿದ ವಿವರಗಳ ಪಟ್ಟಿಯನ್ನು ನಾನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಮಂಜಪ್ಪನವರು ಬಳಿ ಫೋನ್ ಪೇ ಅಕೌಂಟ್ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಮಂಜಪ್ಪನವರಿಗೆ ರೂ. 7 ಲಕ್ಷ ಸಾಲ ಕೊಡಲು ನನಗೆ ಶಕ್ತಿ ಇರಲಿಲ್ಲ ನಾನು ಬೇರೆಯವರಿಂದ ಸಾಲ ಮಾಡಿಕೊಂಡಿದೆ ಎಂದರೆ ಸರಿಯಲ್ಲ. ನಾನು ನಿಪಿ-4 ದಾಖಲೆಯ ಪ್ರಕಾರ ಮನೆಯನ್ನು ಮಾರಾಟ ಮಾಡಿದ ಬಂದತಹ ಹಣನಮ್ನು ನನ್ನ ವ್ಯಾಪಾರಕ್ಕೆ ಬಳಸಿರುತ್ತೇನೆ ಹೊರತು ಮಂಜಪ್ಪನವರಿಗೆ ಸಾಲವಾಗಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ರಾಘವೇಂದ್ರ ರವರು ಹಣ ಪಡೆಯುವ ಸಲುವಾಗಿ ಈ ದಾಖಲೆಯನ್ನು ಸೃಷ್ಟಿ

ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-01 ರಲ್ಲಿ ಸಹಿ ಮತ್ತು ಹೆಬ್ಬೆಟ್ಟು ಗುರುತುಗಳನ್ನು ನಾನೇ ಫೋರ್ಜರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತ ಮಂಜಪ್ಪನವರ ಸಹಿ ಎಂದು ತೋರಿಸಲು ಅವರು ಕೆಲಸ ಮಾಡುತ್ತಿದ್ದ ಸರ್ಕಾರಿ ದಾಖಲೆಯನ್ನು ತಂದು ಹಾಜರು ಪಡಿಸಿರುವುದಿಲ್ಲ.

**ಮುಂದುವರಿಂದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿಃ 27.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿಂದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್.ಎನ್.ಹೆಚ್ ವಕೀಲರಿಂದ ,**

8. ನಾನು ಮಂಜಪ್ಪನವರಿಗೆ ಸಾಲವನ್ನು ಕೊಟ್ಟು ಅವರಿಂದ ನಿಪಿ-01 ಅಂಡಿಮೆಂಟ್ ಪ್ರನೋಟ್ ಅನ್ನು ಬರೆಸಿಕೊಳ್ಳುವ ಸಮಯದಲ್ಲಿ ಅವರ ವಾರಸುದಾರರ ಸಹಿಗಳು ಬೇಕೆಂದು ಕೇಳಿರುವುದಿಲ್ಲ. ಮಂಜಪ್ಪನವರು ನನಗೆ ಸುಮಾರು 10 ವರ್ಷಗಳಿಂದ ನನಗೆ ಪರಿಚಯವಿದ್ದರು. ನಾನು ಮಂಜಪ್ಪನವರಿಗೆ ಹಣ ಕೊಟ್ಟ ಸಂಬಂದವಾಗಿ ಅಂಡಿಮೆಂಟ್ ಅನ್ನು ಬಿಟ್ಟು ಭದ್ರತೆಗಾಗಿ ಬೇರೆ ಯಾವುದೇ ದಾಖಲೆಗಳನ್ನು ತೆಗೆದುಕೊಂಡಿರುವುದಿಲ್ಲ. ಮಂಜಪ್ಪನವರು ಮೃತಪಟ್ಟಾಗ ನಾನು ಅವರ ಅಂತ್ಯಸಂಸ್ಕಾರಕ್ಕೆ ಹೋಗಿರುತ್ತೇನೆ.

9. ಮಂಜಪ್ಪ ಮತ್ತು ಪ್ರತಿವಾದಿ ನಡುವೆ ನನ್ನ ವಿಚಾರವಾಗಿ ಮನಸ್ತಾಪ ಉಂಟಾಗಿ ಪ್ರತಿವಾದಿಗಳು ಚಿತ್ರದುರ್ಗದಲ್ಲಿ ಬೇರೆ ವಾಸವಾಗಿದ್ದ ವಿಚಾರ ನನಗೆ ಗೊತ್ತಿರುವುದಿಲ್ಲ. 2015 ರ ನಂತರ ಮಂಜಪ್ಪ ಮತ್ತು ಪ್ರತಿವಾದಿಗಳು ಒಟ್ಟಿಗೆ ವಾಸವಾಗಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಮಂಜಪ್ಪನವರ ಮನೆಗೆ ಎರಡು ಮೂರು ಬಾರಿ ಹೋದಾಗ ಅವರ ಮಗಳು ಪ್ರಿಯಾಂಕ ಇದ್ದರು. ನಾನು ಹಣ ವಾಪಸ್ಸು ಕೊಡುವಂತೆ ಕೇಳಲು ಮೇಲೆ ಹೇಳಿದ ಎರಡು ಮೂರು ಬಾರಿ ಮಂಜಪ್ಪನವರ ಮನೆಗೆ ಹೋಗಿರುತ್ತೇನೆ. ನಾನು ಸಾಲ ಕೊಟ್ಟ ವಿಚಾರ 03 ನೇ ಪ್ರತಿವಾದಿಗೆ ಗೊತ್ತಿರುತ್ತದೆ ಅವರ ಸಹಿಯನ್ನುಪ್ರನೋಟ್ ಗೆ ಪಡೆದುಕೊಂಡಿರುವುದಿಲ್ಲ.

10. 01 ನೇ ಪ್ರತಿವಾದಿ ಜೀವಾನಂಶಕ್ಕಾಗಿ ಮಂಜಪ್ಪನ ವಿರುದ್ಧ ಚಿತ್ರದುರ್ಗ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಚಿತ್ರದುರ್ಗದಲ್ಲೆ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದ ವಿಚಾರ ನನಗೆ ಗೊತ್ತಿಲ್ಲ. ಈ ಪ್ರಕರಣದ ದಾಖಲು ಮಾಡುವ ಪೂರ್ವದಲ್ಲಿ ಪ್ರತಿವಾದಿಗಳಿಗೆ ಮಂಜಪ್ಪನವರುವ ಪಡೆದಂತಹ ಸಾಲವನ್ನು ವಾಪಸ್ಸು ಕೊಡುವಂತೆ ಕೇಳಿ ಲೀಗಲ್ ನೋಟಿಸ ಕಳುಹಿಸಿರುವುದಿಲ್ಲ. ಮಂಜಪ್ಪನವರು ಜೀವಂತ ಇದ್ದಾಗ ಸಾಲದ ಹಣವನ್ನು ವಾಪಸ್ಸು ಕೊಡುವಂತೆ ಕೇಳಿ ಲೀಗಲ್ ನೋಟಿಸ್ ಕೊಟ್ಟಿರುವುದಿಲ್ಲ.

11. ಮಂಜಪ್ಪನವರು ಸರ್ಕಾರಿ ಕೆಲಸದಲ್ಲಿದ್ದರು ಎಂದರೆ ಸರಿ. ಪ್ರತಿತಿಂಗಳು ಅವರಿಗೆ ಸಂಬಳ ಬರುತ್ತಿತ್ತು ಎಂದರೆ ಸರಿ. ಮಂಜಪ್ಪನವರು ಶಿವಮೊಗ್ಗದ ಎಸ್.ಬಿ.ಐ ಬ್ಯಾಂಕ್ ನಲ್ಲಿ 2022 ರಲ್ಲಿ 07 ಲಕ್ಷ ರೂ. ಸಾಲವನ್ನು ಅವರ ಸಂಬಳದ ಆಧಾರದ ಮೇಲೆ ಅವರು ಪಡೆದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಮಂಜಪ್ಪನವರಿಗೆ ಮದ್ಯಾಪಾನ ಮಾಡುವ ಚಟವಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಮಂಜಪ್ಪನವರು ಮದ್ಯಾಪಾನ ಮಾಡುತ್ತಿದ್ದ ಕಾರಣ ಅವರು ಬಹಳ ದಿನ ಉಳಿಯುವುದಿಲ್ಲ ಎಂದು ನಾನು ಮತ್ತು ಸಾಕ್ಷಿದಾರರಾದ ರಾಘವೇಂದ್ರರವರು ನಿಪಿ-01

ಅಂಡಿಮೇಂಟ್ ಅನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-01(ಎ) ಮತ್ತು (ಬಿ)ನಲ್ಲಿರುವ ಸಹಿಗಳು ವತ್ಯಾಸವಿರುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-01 ಕ್ಕೆ ಸಾಕ್ಷಿದಾರರಾದ ರಾಘವೇಂದ್ರ, ತಳ್ಳಿಕಟ್ಟೆ ಗುರುಮೂರ್ತಿ ಮತ್ತು ಆನಂದಕುಮಾರ್ ರವರು ಸಹಿ ಮಾಡಿರುತ್ತಾರೆ. ಆನಂದಕುಮಾರ್ ರವರು ನನಗೆ ಪರಿಚಯವಿರುವುದಿಲ್ಲ. ಮಂಜಪ್ಪನವರು ಯಾವುದೇ ಹಣವನ್ನು ಪಡೆದಿರುವುದಿಲ್ಲ ಮತ್ತು ನಿಪಿ-01 ಅನ್ನು ಬರೆದುಕೊಟ್ಟಿರುವುದಿಲ್ಲ ಆದರೂ ನಾನು ಮತ್ತು ರಾಘವೇಂದ್ರ, ತಳ್ಳಿಕಟ್ಟೆ ಗುರುಮೂರ್ತಿ ಮತ್ತು ಆನಂದಕುಮಾರ್ ಎಲ್ಲರೂ ಸೇರಿ ನಿಪಿ-01 ಅನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**12.** ದಿಃ 21-01-2022 ರಂದು ನನಗೆ ಸೇರಿದ ಒಂದು ಮನೆಯನ್ನು ಮಾರಾಟ ಮಾಡಿರುತ್ತೇನೆ ಎಂದು ನನ್ನ ವಾದಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸಾಕ್ಷಿಯು ದಿಃ 21-01-2021 ರಲ್ಲಿ ಮಾರಾಟ ಮಾಡಿರುತ್ತೇನೆ ಎಂದು ಹೇಳುತ್ತಾರೆ. ದಿಃ 10-02-2021 ರಂದು ನನ್ನ ಬಳಿ ಹಣ ಇತ್ತು ಎಂದು ತೋರಿಸಲು ದಾಖಲೆಯನ್ನು ನಾನು ಹಾಜರು ಪಡಿಸಿರುವುದಿಲ್ಲ. ಸಾಕ್ಷಿದಾರರೇಲ್ಲರೂ ಜೀವಂತವಿರುತ್ತಾರೆ. ನಾನು ಮಂಜಪ್ಪ ನವರಿಗೆ 07 ಲಕ್ಷ ಹಣವನ್ನು ಕೊಡುವ ಸಮಯಿದಲ್ಲಿ ಯಾವುದೇ ಫೋಟೊವನ್ನು ತೆಗೆದುಕುಂಡಿರುವುದಿಲ್ಲ. ನಾನು ಮಂಜಪ್ಪನವರಿಗೆ ನಗದು ರೂಪದಲ್ಲಿ ಹಣವನ್ನು ಕೊಟ್ಟಿರುತ್ತೇನೆ. ಚೆಕ್ ಮೂಖಾಂತರ ಹಣವನ್ನು ಕೊಟ್ಟಿರುವುದಿಲ್ಲ. ನಾನು ಹೇಳುವ 07 ಲಕ್ಷ ರೂ. ಸಾಲದ ವಿಚಾರ ಪ್ರತಿವಾದಿಗಳಿಗೆ ಯಾರಿಗೂ ಗೊತ್ತಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮಂದುವರಿದು ಆ ವಿಚಾರವಾಗಿ ಅವರಿಗೆ ಗೊತ್ತಿತ್ತೊ ಇಲ್ಲವೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮಂಜಪ್ಪ ಮತ್ತು ಪ್ರತಿವಾದಿಗಳ ನಡುವೆ ಇದ್ದಂತಹ ಬಿನ್ನಾಭಿಪ್ರಾಯವನ್ನು ಬಳಸಿಕೊಂಡು ಈ ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ

ಸರಿಯಲ್ಲ. ಮಂಜಪ್ಪನವರು ಮೃತಪಟ್ಟ ನಂತರ ಪ್ರತಿವಾದಿಗಳಿಗೆ ಮಂಜಪ್ಪನವರು ಪಡೆದುಕೊಂಡ ಸಾಲದ ಹಣವನ್ನು ವಾಪಸ್ಸು ಕೊಡುವಂತೆ ತಗಾದೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್. ಮಂಜಪ್ಪನವರು ಮೃತಪಟ್ಟ ನಂತರ ನಾನು ಭದ್ರಾವತಿ ತಾಲ್ಲುಕಿನ ಮಾಚೇನಹಳ್ಳಿಯಲ್ಲಿ ರುವ ಕೆ.ಎಸ್ .ಅರ್.ಪಿ ಸಿ ಕ್ವಾಟ್ರಸ್ ಗೆ ಹೋಗಿ ಪ್ರತಿವಾದಿ ಗಳಿಗೆ ಹಣ ವಾಪಸ್ಸು ಕೊಡುವಂತೆ ಕೇಳಿರುತ್ತೇನೆ. ಮಂಜಪ್ಪನವರು ಮೃತಪಟ್ಟ ನತಂರ ಪ್ರತಿವಾದಗಳು ಯಾರು ಕ್ವಾಟ್ರಸ್ ನಲ್ಲಿ ವಾಸವಾಗಿರಲಿಲ್ಲ ಎಂದರೆ ಸಾಕ್ಷಿಯು ಅವರು 15-20 ದಿವಸ ಅಲ್ಲೆ ವಾಸವಾಗಿದ್ದರು ಎಂದು ಹೇಳುತ್ತಾರೆ. ಮಂಜಪ್ಪನವರು ನನ್ನಿಂದ ಯಿಾವುದೇ ಸಾಲವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ಗಳಿಗೆ ಸಾಲ ವಾಪಸು ಕುಡುವಂತೆ ಕೇಳಲು ನನಗೆ ಯಾವುದೇ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ಮಂಜಪ್ಪನವರು ಮೃತಪಟ್ಟ ನಂತರ ಪ್ರತಿವಾದಿ ಗಳಿಗೆ ಸರ್ಕಾರದಿಂದ ಹಣಬರುತ್ತದೆ ಎಂದು ಗೊತ್ತಾಗಿ ಆ ಹಣವನ್ನು ಲಪಟಾಯಿಸುವ ಉದ್ದೇಶದಿಂದ ನಿಪಿ-01 ದಾಖಲೆಯನ್ನುಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ಕೇಳಿರುವ ಹಣವನ್ನು ನಾನು ಕೇಳಲು ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

**ದಿಃ 08.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರಿಂದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಕೆ ವಕೀಲರಿಂದ ,**

**13.** ಈ ವ್ಯವಹಾರಕ್ಕಿಂತ ಮುಂಚ್ಚೆ ಮೃತ ಮಂಜಪ್ಪನವರು ನನ್ನಿಂದ ಎರಡು ಬಾರಿ 05 ಸಾವಿರ, 10 ಸಾವಿರದ್ದಂತೆ ಹಣವನ್ನು ಸಾಲವಾಗಿ ಪಡೆದಿದ್ದರು. ಈ ಹಣವನ್ನು ನಾನು ನಗದು ರೂಪದಲ್ಲಿ ಹಣವನ್ನು ಕೊಟ್ಟಿರುತ್ತೇನೆ ಮತ್ತು ಅವರು ಅದನ್ನು ನಗದು ರೂಪದಲ್ಲಿ ಮರುಪಾವತಿ ಮಾಡಿರುತ್ತಾರೆ. 2021 ನೇ ಇಸವಿಯಲ್ಲಿ ನನಗೆ ಯಾವುದೇ ಸಾಲವಿರಲಿಲ್ಲ. ಕ್ರಯಪತ್ರದಲ್ಲಿ ಪತ್ರಬರಹಗಾರರು ಮನೆಯ ತೊಂದರೆಯಿಂದ ಮಾರಾಟ ಮಾಡುತ್ತಿದಾದರೆಂದು ಬರೆದಿರುತ್ತಾರೆ ಅದನ್ನು ನಾನು ಏಕೆ ಬರೆದಿರುತ್ತೀರಾ ಎಂದು ಕೇಳಿರುತ್ತೀನೆ ಆಗ ಅವರು ಏನು ತೊಂದರೆ ಆಗುವುದಿಲ್ಲ, ಪುನಹಃ ಪತ್ರ ತಯಾರು ಮಾಡಲು ಆಗುವುದಿಲ್ಲ, ಸಹಿ ಮಾಡಿ ಎಂದು ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ. ಮನೆ ಮಾರಾಟ ಮಾಡುವ ಸಂಬಂಧ ಕರಾರು ಪತ್ರವನ್ನು ಮಾಡಿಕೊಂಡಿರುವುದಿಲಲ್ಲ ನೇರವಾಗಿ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತೇನೆ. ಮಾತುಕತೆಯಾದ ಸಂದರ್ಭದಲ್ಲಿ 05 ಲಕ್ಷ ನನಗೆ ಕೊಟ್ಟಿದ್ದರು. 05 ಲಕ್ಷ ಪಡೆದ ಬಗ್ಗೆ ಯಾವುದೇ ರಶೀದಿ ಅಥವಾ ಕರಾರು ಇರುವುದಿಲ್ಲ. ಯಾವ ಉದ್ದೇಶಕ್ಕಾಗಿ ಕ್ರಯಪತ್ರ ಬರೆದುಕೊಡುವುದಕ್ಕಿಂತ 2/3 ಬಾರಿ ಹಣವನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಅವರು ತೆಗೆದುಕೊಂಡು ಹೋಗಿ ಎಂದು ಹೇಳಿದ ಕಾರಣ ನಾನು ಹಣವನ್ನು ಪಡೆದಿರುವುದಾಗಿ ಹೇಳುತ್ತಾರೆ.

**14.** 20 ವರ್ಷಗಳಿಂದ ನನ್ನ ಬ್ಯಾಂಕ್ ಖಾತೆ ಇರುತ್ತದೆ. ನನಗೆ ವ್ಯವಹಾರ ಜ್ಞಾನವಿರುತ್ತದೆ. ನಾನು ಸೀರೆ ವ್ಯಾಪಾರ ಮನೆಯಲ್ಲೆ ಮಾಡುತ್ತಿದ್ದೆ, ಯಾವುದೇ ಅಂಗಡಿ ಮತ್ತು ಕಂಪನಿಯ ಹೆಸರಿನಲ್ಲಿ ವ್ಯಾಪಾರ ಮಾಡುತ್ತಿರಲಿಲ್ಲ. ನನಗೆ ಸೀರೆ ವ್ಯಾಪಾರದಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ತೋರಿಸಲು ಆದಾಯ ತೆರಿಗೆ ಪಾವತಿ ಮಾಡಿದ ಬಗ್ಗೆ ದಾಖಲೆ ಇರುವುದಿಲ್ಲ. ನನ್ನ ಎಲ್ಲಾ ವ್ಯವಹಾರಗಳನ್ನು ಬ್ಯಾಂಕ್ ಮೂಲಕವೇ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆಸ್ತಿಯನ್ನು ಮಾರಾಟ ಮಾಡಿ ಬಂದಂತಹ ಹಣವನ್ನು ಬ್ಯಾಂಕ್ ಮೂಖಾಂತರ ಪಡೆಯಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಪ್ರತಿವರ್ಷ ರೂ.01 ಲಕ್ಷ ಹಣವನ್ನು ಲೋನ್ ಬಾಬ್ತು ಮರುಪಾವತಿ ಮಾಡಿರುವುದಿಲ್ಲ. ದಿಃ 12-06-2022 ರಲ್ಲಿ ರೂ. 01 ಲಕ್ಷ ಸಾಲದ ಹಣವನ್ನು ಮರುಪಾವತಿ ಮಾಡಿರುವುದಾಗಿ ನನ್ನ ಬ್ಯಾಂಕ್ ಸ್ಟೇಟ್ ಮೆಂಟ್ ನಲ್ಲಿ ತೋರಿಸಿರುತ್ತಾರೆ ಅದು ಯಾವ ಸಾಲಕ್ಕೆ ಮರುಪಾವತಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಹೇಳಲು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

**15.** ನನಗೆ ಮಂಜಪ್ಪನವರ ಕುಟುಂಬದ ಬಗ್ಗೆ ಮಾಹಿತಿ ಇರುತ್ತದೆ. ಮಂಜಪ್ಪನವರ ಹೆಂಡತಿ ಮಕ್ಕಳು ಪೊಲೀಸ್ ವಸತಿಗೃಹದಲ್ಲಿ ವಾಸವಾಗಿದ್ದರು. ನಾನು ಮೃತ ಮಂಜಪ್ಪನವರ ಮನೆಗೆ ಹೋಗಿರುತ್ತೇನೆ. ನಾನು ಸಾಲ ವಾಪಸ್ಸು ಕೊಡುವಂತೆ ಕೇಳಲು ಮಂಜಪ್ಪನವರು ಮನೆಗೆ ಹೋಗಿರುತ್ತೇನೆ, ಅದಕ್ಕಿಂತ ಮುಂಚ್ಚೆ ಅವರ ಮನೆಗೆ ಹೋಗಿರಲಿಲ್ಲ. ಮಂಜಪ್ಪನವರು ಸಾಲ ಕೇಳುವ ಸಂದರ್ಭದಲ್ಲಿ ಅವರಿಗೆ ಎಷ್ಟು ಜನ ಮಕ್ಕಳು ಎಂದು ಹೇಳಿರುತ್ತಾರೆ ಮತ್ತು ಅವರು ವಸತಿಗೃಹದಲ್ಲಿ ವಾಸವಾಗಿರುವುದಾಗಿ ಹೇಳಿರುತ್ತಾರೆ.

ಮಂಜಪ್ಪನವರು ಕುಡಿತ ಅಭ್ಯಾಸದಿಂದ ಮತ್ತು ಬೇರೆ ದುಶ್ಚಟಗಳಿಂದ ಅವರು ಸರಿಯಾಗಿ ಕೆಲಸಕ್ಕೆ ಹೋಗುತ್ತಿರಲಿಲ್ಲ ಕೆಲಸ ಬಿಟ್ಟು ಆಗಾಗ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಮಂಜಪ್ಪನವರು ಅವರ ಸಂಬಳದ ಹೆಚ್ಚು ಮೊತ್ತವನ್ನು ಅವರ ದುಶ್ಚಟಗಳಿಗೆ ಅವರು ಖರ್ಚು ಮಾಡುತ್ತಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 2000 ನೇ ಇಸವಿಯಿಂದ ಮಂಜಪ್ಪನವರು 01 ನೇ ಪ್ರತಿವಾದಿಗೆ ಕಿರುಕುಳ ಕೊಡುತ್ತಿದ್ದರು ಎಂದು ಹೇಳಿ ಸಾಕಷ್ಟು ಬಾರಿ ಪಂಚಾಯ್ತಿಯಾಗಿತ್ತು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮನೆತನದ ಗೌರವ ಮತ್ತು ಮಕ್ಕಳ ಹಿತ ದೃಷ್ಟಿಯಿಂದ ಮಂಜಪ್ಪನವರ ಕಿರುಕುಳವನ್ನು ಸಹಿಸಿಕೊಂಡು ಬಂದಿರುತ್ತಾರೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 2015 ಸಪ್ಟೆಂಬರ್ ನಲ್ಲಿ ಮಂಜಪ್ಪ ನವರು ಮದ್ಯಾಪಾನ ಮಾಡಿ 01 ನೇ ಪ್ರತಿವಾದಿ ಯನ್ನು ಮನೆಯಿಂದ ಹೊರಗೆ ಹಾಕಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಗೆ ಹಲವಾರು ಖಾಯಿಲೆಗಳು ಇರುವ ಕಾರಣ ಅವರಿಗೆ ದುಡಿಮೆ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. 2017 ರಲ್ಲಿ 01 ನೇ ಪ್ರತಿವಾದಿ ಜೀವನಾಂಶ ಕೋರಿ ಚಿತ್ರದುರ್ಗ ನ್ಯಾಯಾಲಯದಲ್ಲಿ ಸಿ.ಮಿಸ್ 83/2017 ರಲ್ಲಿ ಪ್ರಕರಣ ದಾಖಲು ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮಂಜಪ್ಪ ಮತ್ತು ಪ್ರತಿವಾದಿಗಳು ಒಟ್ಟಿಗೆ ಪೊಲೀಸ್ ವಸತಿಗೃಹದಲ್ಲಿ ಒಟ್ಟಿಗೆ ವಾಸವಾಗಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಂಜಪ್ಪನವರು ಅವರ ದುಶ್ಚಟಗಳಿಗಾಗಿ ಬ್ಯಾಂಕ್ ಮತ್ತು ಬೇರೆ ಬೇರೆ ಕಡೆ ಸಾಲ ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಮಂಜಪ್ಪನವರು ಮದ್ಯಾಪಾನ ಸೇವನೆ ಮಾಡಿ ಲೀವರ್ ಡ್ಯಾಮೆಂಜ್ ಆಗಿ ಕಸ್ತೂರ-ಬಾ ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾರೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮಂಜಪ್ಪನವರು ಎಂದೂ ಹಣವನ್ನು ಕುಟುಂಬದ ಮತ್ತು ಪ್ರತಿವಾದಿಗಳ ಒಲಿತಿಗಾಗಿ ಬಳಸುತ್ತೀರಲಿಲ್ಲ ಎಂದರೆ ಸರಿಯಲ್ಲ. ಮಂಜಪ್ಪನವರಿಗೆ ದುಶ್ಚಟಗಳ ಜೊತೆಗೆ ಬೇರೆ ಬೇರೆ ಮಹಿಳೆಯ ಜೊತೆಯಲ್ಲಿ ಅಕ್ರಮ ಸಂಬಂಧವಿತ್ತು ಎಂದು ನನಗೆ ಗೊತ್ತಿಲ್ಲ. ಮಂಜಪ್ಪನವರು ನನ್ನ ಜೊತೆ ಅಕ್ರಮ ಸಂಬಂಧವಿಟ್ಟು ಕೊಂಡು ಅದನ್ನು ದುರಪಯೋಗಪಡಿಸಿಕೊಂಡು ನಿಪಿ-01 ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮಂಜಪ್ಪನವರು ಮಾಡಿದ ಸಾಲಕ್ಕೆ ಪ್ರತಿವಾದಿಗಳು ಹೊಣೆಗಾರರಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಗಳು ಮಂಜಪ್ಪ ಮೃತಪಟ್ಟ ನಂತರ ಅವರಿಗೆ ಹಣ ಬಂದಿರುತ್ತದೆ ಆಗಾಗಿ ಅವರು ಹೊಣೆಗಾರರು ಎಂದು ಹೇಳಿರುತ್ತಾರೆ. ಮಂಜಪ್ಪ ಮೃತರಾದ ನಂತರ ಬಂದಂತಹ ಹಣವನ್ನು ಲಪಾಟಾಯಿಸುವ ಉದ್ದೇಶದಿಂದ ನಿಪಿ-01 ಆಡಿಮೆಂಟ್ ಪ್ರನೋಟ್ ಅನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಮಂಜಪ್ಪನವರು ಹಿಂದಿನಿಂದಲ್ಲೂ ಹಣಕಾಸಿನ ವ್ಯವಹಾರವನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಮಾಡಿರುತ್ತೆವೆ ಮತ್ತು ಆ, ಹಣಕಾಸು ವ್ಯವಹಾರ ಪ್ರತಿವಾದಿಗಳ ಅನುಕೂಲಕ್ಕೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮಂಜಪ್ಪನವರು SBI ಬ್ಯಾಂಕ್ ನಲ್ಲಿ 7 ಲಕ್ಷ ಸಾಲವನ್ನು ಪಡೆದಿದ್ದು, ಆ, ಸಾಲವನ್ನು ಸಹ ನಾನೇ ಬಳಸಿಕೊಂಡಿರುತ್ತೇನೆಂದರೆ ಸರಿಯಲ್ಲ. ದಿಃ 10-02-2021 ರಂದು ಮಂಜಪ್ಪನವರು ನನ್ನಿಂದ 07 ಲಕ್ಷ ಸಾಲ ಪಡೆದಿರುತ್ತಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 07 ಲಕ್ಷ ಹಣ ಸಾಲವನ್ನು ಕೊಡಲು ಆರ್ಥಿಕ ಚೈತನ್ಯ ಇರುವುದಿಲ್ಲ ಎಂದರೆ ಸರಿಯಲ್ಲ. 07 ಲಕ್ಷ ರೂ.ಗಳನ್ನು

ನಗದಾಗಿ ಪಾವತಿ ಮಾಡುವುದು ಕಾನೂನು ಬಾಹಿರವಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಮಂಜಪ್ಪನವರಿಗೆ ಯಾವುದೇ ಹಣವನ್ನು ಪಾವತಿ ಮಾಡದೆ ಇದ್ದರೂ ಸಹ ನಗದಾಗಿ ಪಾವತಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎಂದೂ ಪ್ರತಿವಾದಿಗಳನ್ನು ಬೇಟಿ ಮಾಡಿರುವುದಿಲ್ಲ ಮತ್ತು ಈ ದಾವೆಗೆ ಸಂಬಂಧಪಟ್ಟಂತೆ ಅವರಿಗೆ ಮಾಹಿತಿ ಸಹ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಸಮಕ್ಷಮದಲ್ಲಿ ಮಂಜಪ್ಪನವರು ಹಣವನ್ನು ಪಡೆದು ನಿಪಿ-01 ಅನ್ನು ಬರೆದುಕೊಟ್ಟಿರುತ್ತಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವುದೇ ಹಣವನ್ನು ವಾಪಸ್ಸು ಕೊಡಲು ಬಾದ್ಯಾಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ